ಓ.ಎಸ್. – 159/2022

ಡಿ. ಡಬ್ಲೂ – 2

ಸಾಕ್ಷಿಯನ್ನು ದಿಃ 14.07.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ.ಬಿ.ವಿ ರವರಿಂದ**

**1.** ಗಾಗಾ ಮಂಕೋಡು ಗ್ರಾಮದ ಸರ್ವೇ ನಂಬರ್ 16 ರಲ್ಲಿ 2 ಎಕರೆ 20 ಗುಂಟೆ ಜಾಗವು ವಾದಿಯ ತಂದೆ ಬಂಗಾರಪ್ಪ ಬಿನ್ ರಾಮಪ್ಪ ರವರಿಗೆ ಮಂಜೂರಾಗಿತ್ತು ಎಂದರೆ ಸರಿ. ವಾದಿಯ ತಂದೆ ಮೃತ ಪಟ್ಟ ನಂತರ ಸದರಿ 2 ಎಕರೆ 20 ಗುಂಟೆ ಜಾಗವು ವಾದಿಯ ಹೆಸರಿಗೆ ಖಾತೆ ಬದಲಾವಣೆ ಆಯಿತು ಎಂದರೆ ಸರಿ. ವಾದಿ ಮತ್ತು ಅವರು ಕುಟುಂಬದವರು ಪರಿಶಿಷ್ಟ ಜಾತಿಯವರಾಗಿರುವುದರಿಂದ ಬಂಗಾರಪ್ಪನಿಗೆ ದರ್ಕಾಸ್ತು ಮೂಲಕ ಮೇಲಿನ ಸ್ವತ್ತು ಮಂಜೂರಾಗಿತ್ತು ಎಂದರೆ ಸರಿ. ಮಂಜೂರಾತಿ ದಿನದಿಂದ ಈವರೆಗೆ ವಾದಿಯ ತಂದೆ ಹಾಗೂ ಅವರ ನಂತರ ವಾದಿಯು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಮುಂದುವರೆದು ಈಗ ಅಲ್ಲಿ ಯಾವುದೇ ಸಾಗುವಳಿ ಇಲ್ಲ ಎಂದು ನುಡಿಯುತ್ತಾರೆ. ವಾದಿಯ ತಂದೆಗೆ ಮಂಜೂರಾಗಿರುವ 2 ಎಕರೆ 20 ಗುಂಟೆ ಜಮೀನಿಗೆ 10 ದಿನಗಳ ಹಿಂದೆ ಭೇಟಿ ನೀಡಿದ್ದೇನೆ. ನಾನು ವಾದಿಯ ತಂದೆಗೆ ಮಂಜೂರಾಗಿರುವ ಸ್ವತ್ತಿಗೆ ಭೇಟಿ ನೀಡದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದುವರೆದು ನಾನು ಭೇಟಿ ನೀಡಿರುವ ಬಗ್ಗೆ ಫೋಟೋ ಇದೆ ಎನ್ನುತ್ತಾರೆ. ಸದರಿ ಫೋಟೋಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಬಲ್ಲೆ. ನಾನು ಸ್ಥಳ ತನಿಖೆಗೆ ಹೋದಾಗ ವಾದಿಗೆ ಅಥವಾ ಅಕ್ಕ ಪಕ್ಕದ ಜಮೀನಿನವರಿಗೆ ತಿಳುವಳಿಕೆ ನೋಟೀಸ್ ಅನ್ನು ನೀಡಿಲ್ಲ.

**2.** ನಿಡಿ–4 ರಿಂದ 8 ರ ದಾಖಲೆಗಳು ವಾದಿಯ ತಂದೆ ಬಂಗಾರಪ್ಪನಿಗೆ ಮಂಜೂರಾಗಿರುವ ಸ್ವತ್ತಿನ ದಾಖಲೆಗಳು ಎಂದರೆ ಸರಿ. ವಾದಿಯು ದಾವಾ ಸ್ವತ್ತಿನಲ್ಲಿ ಸಾಗುವಳಿ ಮಾಡುತ್ತಿದ್ದಾಗ ನಮ್ಮ ಇಲಾಖೆಯ ಅಧಿಕಾರಿಗಳು ಅಕ್ರಮವಾಗಿ ತಡೆದರು ಎಂದರೆ ಸರಿಯಲ್ಲ. ಮುಂದುವರೆದು ದಾವಾ ಸ್ವತ್ತು ಸರ್ಕಾರದ ಸ್ವತ್ತಾಗಿರುವುದರಿಂದ ನಮ್ಮ ಇಲಾಖೆಯವರು ಅವರ ಸಾಗುವಳಿಯನ್ನು ತಡೆದಿರುವುದು ನಿಜ ಎನ್ನುತ್ತಾರೆ. ದಾವಾ ಸ್ವತ್ತು ಈಗ ವಾದಿಯ ತಂದೆಯಿಂದ ವಾದಿಯ ಹೆಸರಿನಲ್ಲಿ ವರ್ಗಾವಣೆಯಾಗಿದೆ ಎನ್ನುವುದು ಸರಿಯಲ್ಲ. ಮುಂದುವರೆದು ದಾವಾ ಸ್ವತ್ತು ಸರ್ಕಾರದ ಸ್ವತ್ತಾಗಿದ್ದು, ನಾವು ವಾದಿಗೆ

ವರ್ಗಾವಣೆ ಮಾಡಿದ ಸ್ವತ್ತು ಬೇರೆ ಸ್ವತ್ತು ಎನ್ನುತ್ತಾರೆ. ವಾದಿಯ ತಂದೆಗೆ ಮಂಜೂರಾಗಿದ್ದ ಸ್ವತ್ತು ಬೇರೆ ಸ್ವತ್ತು ಎನ್ನುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ವಾದಿಯ ತಂದೆಗೆ ಮಂಜೂರಾಗಿದ್ದ ಸ್ವತ್ತು ಯಾವುದೇ ಎನ್ನುವ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿದ್ದು, ಅದು ನಿಡಿ–6 ರ ನಕ್ಷೆಯಾಗಿದೆ. ನಿಡಿ–6 ರ ನಕ್ಷೆಯಲ್ಲಿ ಬ್ಲಾಕ್ ನಂಬರ್ 5 ಎಂದು ಕಾಣಿಸಿರುವ ಜಾಗ ವಾದಿಗೆ ನಾವು ದರ್ಕಾಸ್ತಿನಲ್ಲಿ ಮಂಜೂರು ಮಾಡಿರು ಜಾಗ ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ಬ್ಲಾಕ್ ನಂಬರ್ 5 ರ ಜಾಗವೇ ವಾದಿಯ ತಂದೆಗೆ ಮಂಜೂರಾಗಿದೆ ಎನ್ನುವ ಬಗ್ಗೆ ನಿಡಿ–6 ರಲ್ಲಿ ಬರೆದಿಲ್ಲ ಎಂದರೆ, ಸಾಕ್ಷಿಯು ನಿಡಿ–1 ಅನ್ನು ಮಂಜೂರಾತಿ ಸಂದರ್ಭದಲ್ಲಿ ತಯಾರಿಸಲಾಗಿದೆ. ಆದ ಕಾರಣ ಬೇರೆ ದಾಖಲೆಯ ಅವಶ್ಯಕತೆ ಇರುವುದಿಲ್ಲ. ಕಾರಣ ಮಂಜೂರಾತಿ ಸಂದರ್ಭದಲ್ಲಿ ತಯಾರು ಮಾಡುವ ನಕ್ಷೆಯೇ ಅಂತಿಮ ನಕ್ಷೆಯಾಗಿರುತ್ತದೆ ಎಂದು ನುಡಿಯುತ್ತಾರೆ.

**3.** ಯಾವುದೇ ನಕ್ಷೆಯನ್ನು ತಯಾರಿಸುವಾಗ ಸಂಬಂಧಪಟ್ಟ ಎಡಿ ಎಲ್ ಆರ್ ರವರು ನಕ್ಷೆಯಲ್ಲಿ ಕಾಣಿಸಿದ ಬ್ಲಾಕ್ ನಂಬರುಗಳ ಜಮೀನುಗಳು ಮಂಜೂರಾದ ಫಲಾನುಭವಿಗಳ ಹೆಸರನ್ನು ನಕ್ಷೆಯಲ್ಲಿಯೇ ಬರೆಯುತ್ತಾರೆ ಎಂದರೆ ಸರಿ. ಮುಂದುವರೆದು ನಿಡಿ–6 ಅನ್ನು ದಿನಾಂಕ 23.09.1988 ರಂದು ತಯಾರಿಸಿದ್ದು, ಆ ಸಂದರ್ಭದಲ್ಲಿ ನಕ್ಷೆಯಲ್ಲಿ ಫಲಾನುಭವಿಗಳ ಹೆಸರನ್ನು ಬರೆಯುವ ವಾಡಿಕೆ ಇರಲಿಲ್ಲ ಎನ್ನುತ್ತಾರೆ. ನಕ್ಷೆಯಲ್ಲಿ ಬ್ಲಾಕ್ ನಂಬರ್ ಮತ್ತು ಫಲಾನುಭವಿಗಳ ಹೆಸರನ್ನು ಬರೆಯುವುದು ವಾಡಿಕೆಯಲ್ಲ. ಅದು ಕಾಯಿದೆಯು ಅಗತ್ಯ ಪಡಿಸಿದ ನಿಯಮ ಎಂದರೆ ಸರಿ.

**4.** ದಿನಾಂಕ 29.07.2022 ರಂದು ಕಂದಾಯ ನಿರೀಕ್ಷಕರು ನಿಡಿ–2 ರಂತೆ ಸಾಗರದ ತಹಶೀಲ್ದಾರ್ ಅಂದರೆ ನಮ್ಮ ಕಚೇರಿಗೆ ವರದಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ವರದಿಯಲ್ಲಿ ನಾಗರಾಜ ಬಿನ್ ಬಂಗಾರಪ್ಪ ಖಾತೆದಾರಾಗಿದ್ದು, 2 ಎಕರೆ 20 ಗುಂಟೆ ಜಮೀನು ಇರುತ್ತದೆ ಮತ್ತು ಯಾವುದೇ ಬೆಳೆ ಬೆಳೆದಿರುವುದಿಲ್ಲ ಮತ್ತು ಸುಮಾರು ವರ್ಷಗಳಿಂದ ಖಾಲಿ ಇದ್ದು, ಈಗ ಈ ಜಮೀನು ನನ್ನದು ಎಂದು ಸ್ವಚ್ಛತೆ ಮಾಡಲು ಪ್ರಯತ್ನಿಸಿರುತ್ತಾರೆ ಎಂದು ಬರೆದಿದೆ ಎಂದರೆ ಸರಿ. ನಿಡಿ–2 ರ ವರದಿ ಸಲ್ಲಿಸುವ ಕಾಲಕ್ಕೆ ರಾಜಸ್ವ ನಿರೀಕ್ಷಕರು ನಿಡಿ–3 ಮತ್ತು 4 ರಂತೆ ಜಿಪಿಎಸ್ ಫೋಟೋ ತೆಗೆದು, ಸದರಿ ಜಾಗ ಸರ್ಕಾರಿ ಜಾಗವಾಗಿದ್ದು, ಅತಿಕ್ರಮ ಪ್ರವೇಶ ಮಾಡುವುದನ್ನು ನಿಷೇಧಿಸಿದೆ ಎಂದು ಎಚ್ಚರಿಕೆ ಫಲಕವನ್ನು ಹಾಕಿದ್ದಾರೆ. ನಿಡಿ–3 ರಲ್ಲಿ ಕಂಡ ಜಾಗದಲ್ಲಿ ವಾದಿಯು ಅತೀಕ್ರಮಣ ಮಾಡಿಲ್ಲ ಎನ್ನುವುದು ಸರಿಯಲ್ಲ. ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿದ್ದರ ಬಗ್ಗೆ ವಾದಿಗೆ ತಿಳುವಳಿಕೆಯನ್ನು ನೀಡಿ ಎಚ್ಚರಿಕೆಯನ್ನು

ನೀಡಿದ್ದೇವೆ. ಆದರೆ ಕಾನೂನಿನ ಕ್ರಮವನ್ನು ನಾವು ವಾದಿಯ ವಿರುದ್ಧ ಜರುಗಿಸಿಲ್ಲ. ನಾವು ತೆರವುಗೊಳಿಸಿದೆವು ಎಂದು ಹೇಳುವ ಜಾಗವನ್ನು ವಾದಿಯು ಒತ್ತುವರಿ ಮಾಡಿಲ್ಲ ಎನ್ನುವುದು ಸರಿಯಲ್ಲ. ಮುಂದುವರೆದು ನಾವು ಸರ್ಕಾರಿ ಜಾಗವನ್ನು ಸಂರಕ್ಷಣೆ ಮಾಡಿದ್ದು ನಿಜ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಸಾಗರ ನಗರಕ್ಕೆ ಹತ್ತಿರದಲ್ಲಿರುವುದರಿಂದ ಅದನ್ನು ಕಬಳಿಸಿ ಬೇರೆ ಉದ್ದೇಶಕ್ಕೆ ಬಳಸಬೇಕು ಎನ್ನುವ ಉದ್ದೇಶದಿಂದ ನಾನು ವಾದಿಗೆ ಮಂಜೂರಾಗಿರುವ ಸ್ವತ್ತು ಬೇರೆ ಕಡೆ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೊರತು ಪಡಿಸಿ ವಾದಿಗೆ ಬೇರೆ ಜಮೀನು ಇಲ್ಲ ಎಂದರೆ, ಸಾಕ್ಷಿಯು ಅವರಿಗೆ ಮಂಜೂರಾಗಿರುವ ಜಮೀನನ್ನು ಅವರು ಅನುಭವಿಸಲು ನಮಗೆ ಯಾವುದೇ ತಕರಾರು ಇಲ್ಲ ಎನ್ನುತ್ತಾರೆ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.